155ಸಂ6 ನಿ-72-2
4ನ
2807

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ. ತಳವಾರ ಸಾಬಣ್ಣಾ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಸೂಚನೆ**

"ಬೆಳಗಾವಿಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳಿದ್ದರೂ ಫೌಂಡ್ರಿ ಕೈಗಾರಿಕೆಗಳಿಗೆ, ಐಟಿ ಕೈಗಾರಿಕೆಗಳಿಗೆ ಹಾಗೂ ಇನ್ನಿತರ ಕೈಗಾರಿಕೆಗಳಿಗೆ ವಿಪುಲ ಅವಕಾಶಗಳಿದ್ದರೂ ಕೈಗಾರಿಕಾ ವಸಾಹತುಗಳು ಮತ್ತು ಕೈಗಾರಿಕಾ ಕಾರಿಡಾರ್ ಗೆ ಉತ್ತೇಜನ ಸಿಗದಿರುವ ಕುರಿತು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಮಂತ್ರಿಯವರ ಸೆಳೆಯ ಬಯಸುತ್ತೇನೆ".

**ಉತ್ತರ**

1. ಬೆಳಗಾವಿ ಜಿಲ್ಲೆಯು ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು, ಗೋವಾ ಮತ್ತು ಕಾರವಾರ ಬಂದರಿಗೆ ಹತ್ತಿರದಲ್ಲಿದೆ. ಹೀಗಾಗಿ ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಶಸ್ತವಾಗಿದೆ. ಕರ್ನಾಟಕದಲ್ಲಿ ಅತೀ ಹೆಚ್ಚು ಫೌಂಡ್ರಿ ಘಟಕಗಳನ್ನು ಬೆಳಗಾವಿಯು ಹೊಂದಿರುತ್ತದೆ. ಜಿಲ್ಲೆಯಲ್ಲಿ ಆಟೋಮೊಬೈಲ್ಸ್, ಹೈಡ್ರಾಲಿಕ್ಸ್ ಮತ್ತು ಏರೋನಾಟಿಕ್ಸ್ ಕಾಂಪೋನೆಂಟ್‌ಗಳನ್ನು ಉತ್ಪಾದಿಸಿ ಸರಬರಾಜು ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ 100ಕ್ಕೂ ಹೆಚ್ಚು ರಫ್ತುದಾರ ಉತ್ಪಾದನಾ ಘಟಕಗಳಿವೆ.

2. ಜಿಲ್ಲೆಯಲ್ಲಿ 27 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕದ ಶುಗರ್ ಬೌಲ್ ಎಂಬ ಖ್ಯಾತಿ ಪಡೆದಿದೆ.

3. ಜಿಲ್ಲೆಯಲ್ಲಿ 8 ಕೈಗಾರಿಕಾ ಪ್ರದೇಶಗಳನ್ನು ಕೆ.ಐ.ಎ.ಡಿಬಿ ಯಿಂದ ಅಭಿವೃದ್ಧಿಪಡಿಸಿ ಕೈಗಾರಿಕೆಗಳಿಗೆ ಹಂಚಿಕೆ ಮಾಡಲಾಗಿದೆ.

4. ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಯನ್ನು ತ್ವರಿತಗೊಳಿಸಲು ಕಳೆದ ವರ್ಷ ನಡೆದ ಚಳಿಗಾಲದ ಅಧಿವೇಶನ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಫೌಂಡ್ರಿ ಪಾರ್ಕ್ ಸ್ಥಾಪನೆಗೆ 500 ಎಕರೆ ಮತ್ತು ಇತರೆ ಕೈಗಾರಿಕೆಗಳ ಸ್ಥಾಪನೆಗೆ 2000 ಎಕರೆ ಭೂಮಿಯನ್ನು ಒದಗಿಸಲು ಕ್ರಮ ವಹಿಸುವುದಾಗಿ ಘೋಷಣೆ ಮಾಡಿರುತ್ತಾರೆ.

5. ಅದರಂತೆ ಜಿಲ್ಲೆಯ ವಂಟಮುರಿ ಗ್ರಾಮದಲ್ಲಿ 2500 ಎಕರೆ ಸರ್ಕಾರಿ ಜಮೀನನ್ನು ಗುರುತಿಸಿದ್ದು, ಸದರಿ ಜಮೀನಿಗೆ ಸಂಬಂಧಿಸಿದಂತೆ, ಭೂಸ್ವಾಧೀನ ರದ್ದುಪಡಿಸಲು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡದಲ್ಲಿ ದಾವೆಯನ್ನು ಹೂಡಿದ್ದು, ದಾವೆ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಲಾಗಿದೆ.

6. ಅಲ್ಲದೇ, ಕಣಗಲಾ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ಕರಜಗಾ ಗ್ರಾಮದ 575 ಎಕರೆ ಜಮೀನಿನಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

7. ಮುಂದುವರೆದಂತೆ, ಕಿತ್ತೂರು ಕುಳವಳ್ಳಿ ಗ್ರಾಮದಲ್ಲಿ 900 ಎಕರೆ ಮತ್ತು ಖಾನಾಪೂರದಲ್ಲಿ 958 ಎಕರೆ ಭೂಮಿಯನ್ನು ಜಂಟಿ ಪರಿಶೀಲನೆ ಮಾಡಿ ಮುಂದಿನ ಸ್ವಾಧೀನ ಪ್ರಕ್ರಿಯೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

8. ಒಟ್ಟಾರೆ ಬೆಳಗಾವಿ ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಹಂತಹಂತವಾಗಿ ಸೂಕ್ತ ಕ್ರಮ ವಹಿಸಲಾಗುತ್ತಿದೆ.

**ಸಂಖ್ಯೆ: ಸಿಐ 62 ಎಸ್‌ಪಿಐ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.